ಓಎಸ್. 100/2016 ಡಿಡಬ್ಲ್ಯೂ3

ದಿನಾಂಕಃ 08.04.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ವಾದಿ ಪರ ಶ್ರೀ ಡಿ ಎಂ ಎಸ್. ವಕೀಲರಿಂದಃ

ನಾನು ಎಂಟನೇ ತರಗತಿವೆರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುವುದಿಲ್ಲ. ನಾನು ಹಾರ್ಮೋನಿಯಂ ನುಡಿಸುತ್ತೇನೆ. ನನಗೆ ಜಮೀನು ಇರುತ್ತದೆ.

ನನಗೂ ವಾದಿಗೂ ಮಾತುಕತೆ ಇರುವುದಿಲ್ಲ. ನನಗೆ ಸುಮಾರು 61 ವರ್ಷ ಆಗಿದೆ. ನಾನು ರಾಮಸಮುದ್ರದ ಚೌಡೇಶ್ವರಿ ಗುಡಿ ಬೀದಿಯಲ್ಲಿ ವಾಸವಾಗಿದ್ದೇನೆ. ನಾನು ಚೌಡೇಶ್ವರಿ ಗುಡಿ ಬೀದಿಯಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಆಸ್ತಿ ಈ ಹಿಂದೆ ನಾಗರತ್ನಮ್ಮ ಉ ಪುಟ್ಟಮ್ಮರವರಿಗೆ ಸೇರಿತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ಆಸ್ತಿಯನ್ನು ನಾಗರತ್ನಮ್ಮ ಉ ಪುಟ್ಟಮ್ಮರವರಿಂದ ಗುರುಸ್ವಾಮಿಯವರು ಖರೀದಿ ಮಾಡಿದ್ದರು ಎಂದರೆ ಸರಿ. ಗುರುಸ್ವಾಮಿಯವರಿಂದ ದಾವಾ ಷೆಡ್ಯೂಲ್ ಆಸ್ತಿಯನ್ನು ವಾದಿಯವರು ಖರೀದಿ ಮಾಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಅಸೆಸಮೆಂಟ್ ನಂಬರ್ 593 ಆಗಿದ್ದು ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾಸ ಮಾಡುತ್ತಿರುವ ಹೆಂಚಿನ ಮನೆ ಈ ಹಿಂದೆ ವೆಂಕಟರಮಣಯ್ಯ ಮತ್ತು ಗೋಪಾಲಕೃಷ್ಣಯ್ಯರವರಿಗೆ ಸೇರಿತ್ತು ಎಂದರೆ ಸರಿ. ಸದರಿ ವೆಂಕಟರಮಣಯ್ಯ ಮತ್ತು ಗೋಪಾಲಕೃಷ್ಣಯ್ಯರವರು ಸಹೋದರರು ಎಂದರೆ ಸರಿ. ಸದರಿ ವೆಂಕಟರಮಣಯ್ಯ ಮತ್ತು ಗೋಪಾಲಕೃಷ್ಣಯ್ಯರವರು ತಮ್ಮ ಮನೆ ಮತ್ತು ನಿವೇಶನವನ್ನು ಸಮನಾಗಿ ಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಖರೀದಿಸಿದ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ.

2. ಪ್ರತಿವಾದಿಗಳು ಮನೆಗೆ ಬಿ. ಷೆಡ್ಯೂಲ್ ಸ್ವತ್ತಿನಲ್ಲಿ ಪಾಯ ಹಾಕುವಾಗಲೇ ವಾದಿಮತ್ತು ಪ್ರತಿವಾಗಳಿಗೆ ತಕರಾರು ಪ್ರಾರಂಭ ಆಯಿತು ಎಂದರೆ ಸರಿಯಲ್ಲ. ಈ ವಿಚಾರವಾಗಿ ಊರಿನಲ್ಲಿ ಪಂಚಾಯಿತಿ ನಡೆಯಿತು ಎಂದರೆ ಸರಿ. ಪ್ರತಿವಾದಿಗಳು ಪಾಯ ಹಾಕಲು ಪ್ರಾರಂಭಿಸಿದಾಗಲೇ ವಾದಿಯು ಈ ಬಗ್ಗೆ ಪ್ರತಿವಾದಿಗಳ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಮನೆ ಕಟ್ಟಿ ಪೂರ್ಣಗೊಂಡ ನಂತರ ದೂರು ನೀಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಮನೆ ಕಟ್ಟಲು ಪ್ರಾರಂಭ ಮಾಡಿದ ತಕ್ಷಣ ವಾದಿ ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮನೆ ಕಟ್ಟಿರುವಾಗ ಬಿ ಷೆಡ್ಯೂಲ್ ಸ್ವತ್ತು ವಾದಿಯ ಸ್ವಾಧೀನದಲ್ಲಿ ಇತ್ತು ಎಂದರೆ ಸರಿಯಲ್ಲ.

ಪ್ರತಿವಾದಿಗಳು ಬಿ ಷೆಡ್ಯೂಲ್ ಸ್ವತ್ತನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಬಿ ಷೆಡ್ಯೂಲ್ ಸ್ವತ್ತು ಪ್ರತಿವಾದಿಗಳಿಗೆ ಸೇರುತ್ತದೆಯೋ ಇಲ್ಲವೋ ಎಂಬ ಬಗ್ಗೆ ನಾನು ಪ್ರತಿವಾದಿಗಳ ಕ್ರಯಪತ್ರವನ್ನು ನೋಡಿರುವುದಿಲ್ಲ. ಪ್ರತಿವಾದಿ ಮನೆ ಕಟ್ಟಿರುವ ಜಾಗ ವಾದಿಗಳಿಗೆ ಸೇರಬೇಕು ಎಂದರೆ ಸರಿಯಲ್ಲ. ಆರ್ ಸಿ ಸಿ ಮನೆ ಕಟ್ಟುವ ಮೊದಲು ವಾದಿಗಳು ಆ ಜಾಗದ ಸ್ವಾಧೀನದಲ್ಲಿದ್ದರು ಪ್ರತಿವಾದಿಗಳು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮನೆ ಕಟ್ಟಿರುವ ವಿಸ್ತೀರ್ಣ 20 ಅಡಿ x 11 ಅಡಿ ವಿಸ್ತೀರ್ಣ ಇರುತ್ತದೆ. ನಾನು ದಾವಾ ಸ್ವತ್ತನ್ನು ನೋಡಿಲ್ಲ ಮತ್ತು ದಾವಾ ಸ್ವತ್ತಿನ ಬಗ್ಗೆ ನನಗೇನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಓಎಸ್. 100/2016 ಡಿಡಬ್ಲ್ಯೂ:2

ದಿನಾಂಕ: 08.04.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: ವಾದಿ ಪರ ಶ್ರೀ ಡಿ ಎಂ ಎಸ್. ವಕೀಲರಿಂದ:

ದಾವಾ ಸ್ವತ್ತಿನ ಅಸೆಸ್ಮೆಂಟ್ ನಂಬರ್ ನನಗೆ ಗೊತ್ತಿಲ್ಲ. ವಾದಿಗಳು ಖರೀದಿಸಿದ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯ ಅಸೆಸ್ಮೆಂಟ್ ನಂಬರ್ , ವಿಸ್ತೀರ್ಣ ಇತ್ಯಾದಿ ವಿವರಗಳು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ವಾಸ ಮಾಡುತ್ತಿರುವ ಹೆಂಚಿನ ಮನೆ ಈ ಹಿಂದೆ ವೆಂಕಟರಮಣಯ್ಯ ಮತ್ತು ಗೋಪಾಲಕೃಷ್ಣಯ್ಯರವರಿಗೆ ಸೇರಿತ್ತು ಎಂದರೆ ಸರಿ. ಸದರಿ ವೆಂಕಟರಮಣಯ್ಯ ಮತ್ತು ಗೋಪಾಲಕೃಷ್ಣಯ್ಯರವರು ಸಹೋದರರು ಎಂದರೆ ಸರಿ. ಸದರಿ ವೆಂಕಟರಮಣಯ್ಯ ಮತ್ತು ಗೋಪಾಲಕೃಷ್ಣಯ್ಯರವರು ತಮ್ಮ ಮನೆ ಮತ್ತು ನಿವೇಶನವನ್ನು ಸಮನಾಗಿ ಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ದಾವಾ ಷೆಡ್ಯೂಲ್ ಆಸ್ತಿ ಈ ಹಿಂದೆ ನಾಗರತ್ನಮ್ಮ ಉ ಪುಟ್ಟಮ್ಮರವರಿಗೆ ಸೇರಿತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ಆಸ್ತಿಯನ್ನು ನಾಗರತ್ನಮ್ಮ ಉ ಪುಟ್ಟಮ್ಮರವರಿಂದ ಗುರುಸ್ವಾಮಿಯವರು ಖರೀದಿ ಮಾಡಿದ್ದರು ಎಂದರೆ ಸರಿ. ಗುರುಸ್ವಾಮಿಯವರಿಂದ ದಾವಾ ಷೆಡ್ಯೂಲ್ ಆಸ್ತಿಯನ್ನು ವಾದಿಯವರು ಖರೀದಿ ಮಾಡಿದ್ದಾರೆ ಎಂದರೆ ಸರಿ.

2. ಪ್ರತಿವಾದಿಗಳ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಮನೆಗೆ ಪಾಯ ಹಾಕುವಾಗಲೇ ವಾದಿಯು ಸದರಿ ಜಾಗ ತಮಗೆ ಸೇರಿದ್ದು ಎಂದು ಊರಿನಲ್ಲಿ ಪಂಚಾಯಿತಿ ನಡೆಸಿದ್ದರು ಎಂದರೆ ಸರಿಯಲ್ಲ. ಊರಿನಲ್ಲಿ ಪಂಚಾಯಿತಿ ಆದ ನಂತರ ಮುಖಂಡರು ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಕಟ್ಟಡ ಕಟ್ಟದಂತೆ ಪ್ರತಿವಾದಿಗಳಿಗೆ ಬುದ್ಧಿ ಹೇಳಿದರು ಎಂದರೆ ಸರಿಯಲ್ಲ. ವಾದಿಯವರು ಈ ಬಗ್ಗೆ ಪ್ರತಿವಾದಿಗಳ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ವಾದಿಯವರು ಗುರುಸ್ವಾಮಿಯವರಿಂದ ಖರೀದಿ ಮಾಡಿದ ಆಸ್ತಿಯ ಮೇಲೆ ಪ್ರತಿವಾದಿಗಳಿಗೆ ಹಕ್ಕು ಇಲ್ಲಾ ಎಂದರೆ ಸರಿ. ಗೋಪಾಲಕೃಷ್ಣಯ್ಯ ಮತ್ತು ವೆಂಕಟರಮಣಯ್ಯರವರು ಆಸ್ತಿಯನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂಬುವುದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾಸ ಮಾಡುತ್ತಿರುವ ಹೆಂಚಿನ ಮನೆ ಮತ್ತು ನಿವೇಶನವನ್ನು ವೆಂಕಟರಮಣಯ್ಯರವರಿಂದ ಖರೀದಿ ಮಾಡಿರುತ್ತಾರೆ. ಪ್ರತಿವಾದಿಗಳು ತಾವು ಖರೀದಿಸಿರುವ ಆಸ್ತಿಗೆ ಮಾತ್ರ ಹಕ್ಕುದಾರರು ಎಂದರೆ ಸರಿ. ಪ್ರತಿವಾದಿಗಳು ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮನೆ ಕಟ್ಟಲು ಶುರು ಮಾಡಿದಾಗ ವಾದಿಯು ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸಾಕ್ಷಿ ಅವರು ಮನೆ ಕಟ್ಟಿ ಮುಗಿದ ನಂತರ ಈ ದಾವೆ ಹಾಕಿದ್ದಾರೆ ಎಂದು ನುಡಿಯುತ್ತಾರೆ. ನಾನು ಈ ಬಗ್ಗೆ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರು ಮನೆ ಕಟ್ಟುವಾಗ ವಾದಿ ಮತ್ತು ಪ್ರತಿವಾದಿ ಸಂಬಂಧ ಚೆನ್ನಾಗಿತ್ತು. ಪ್ರತಿವಾದಿ ಮನೆ ಕಟ್ಟಲು ಪ್ರಾರಂಭಿಸಿದಾಗ ವಾದಿ ಮತ್ತು ಪ್ರತಿವಾದಿಯ ನಡುವೆ ತಕರಾರು ಉಂಟಾಗಿರುತ್ತದೆ. ನನಗೆ ದಾವಾ ಸ್ವತ್ತಿನ ಬಗ್ಗೆ ಗೊತ್ತಿಲ್ಲದಿದ್ದರೂ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಸ್ವತ್ತು ವಾದಿಗಳ ಮಾಲೀಕತ್ವಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಜಮೀನು ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಆರ್ ಸಿ ಸಿ ಮನೆಯಲ್ಲಿ ಸುಮಾರು 40 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.